RADHA SHEDDI
Digitally signed by RADHA SHEDDI
Date: 2026.06.02 16:18:17 +0530

KARN320019372018

Presented on : 17-10-2018
Registered on : 17-10-2018
Decided on : 01-06-2026
Duration : 07 years, 07 months, 15 days

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕನಕಪುರ.

ಉಪಸ್ಥಿತರು : ಶ್ರೀಮತಿ ರಾಧಾ ಎಸ್.
ಬಿ.ಎ. ಎಲ್.ಎಲ್.ಎಂ.,
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ.

**ದಿನಾಂಕ 01ನೇ ಜೂನ್ 2026.**

**C.C.924/2018**

ಪಿರ್ಯಾದುದಾರರು : ರಾಜ್ಯದ ಪರವಾಗಿಃ
ಹಾರೋಹಳ್ಳಿ ಪೊಲೀಸ್ ಠಾಣೆ.

**(ಸಹಾಯಕ ಸರ್ಕಾರಿ ಅಭಿಯೋಜಕರು)**

ವಿರುದ್ಧ

ಆರೋಪಿತ : ಮಹದೇವಯ್ಯ
ಬಿನ್ ಮಾದಪ್ಪ
ವಯಸ್ಸು 32 ವರ್ಷಗಳು,
ವಾಸಃ ತಟ್ಟೆಕೆರೆ ಗ್ರಾಮ,
ಮರಳವಾಡಿ ಹೋಬಳಿ,

ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

**(ಪ್ರತಿನಿಧಿಸುವವರು: ಶ್ರೀ.ಎಂ.ಎಂ., ವಕೀಲರು)**

| | | |
|---|---|---|
| ಘಟನೆ ನಡೆದ ದಿನಾಂಕ | : | 08.12.2017 |
| ಆರೋಪಿತನು ನ್ಯಾಯಾಲಯಕ್ಕೆ ಹಾಜರಾದ ದಿನಾಂಕ | : | 11.12.2017 |
| ಆರೋಪಿತನನ್ನು ಬಿಡುಗಡೆ ಮಾಡಿದ ದಿನಾಂಕ | : | 11.12.2017 |
| ಸಾಕ್ಷಿದಾರರ ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 07.11.2023 |
| ಸಾಕ್ಯ ಮುಗಿದ ದಿನಾಂಕ | : | 10.04.2026 |
| ಪ್ರಕರಣದ ಆರೋಪಗಳು | : | ಭಾರತೀಯ ದಂಡ ಸಂಹಿತೆಯ ಕಲಂ. 384 |
| ನ್ಯಾಯಾಧೀಶರ ಅಭಿಪ್ರಾಯ | : | ಅಂತಿಮ ಆದೇಶದಂತೆ |
| ಸರ್ಕಾರದ ಪರ | : | ಸಹಾಯಕ ಸರ್ಕಾರಿ ಅಭಿಯೋಜಕರು |
| ಆರೋಪಿತನ ಪರ ವಕೀಲರು | : | ಶ್ರೀ.ಎಂ.ಎಂ., ವಕೀಲರು |

(ಶ್ರೀಮತಿ. ರಾಧ. ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ.

**ತೀರ್ಪು**

ಹಾರೋಹಳ್ಳಿ ಪೋಲೀಸರು ಆರೋಪಿತನ ವಿರುದ್ಧ ತನಿಖೆಯನ್ನು ಪೂರೈಸಿ ಭಾರತೀಯ ದಂಡ ಸಂಹಿತೆಯ ಕಲಂ.384 ರಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು

ಹೇಳಿ ದೋಷಾರೋಪಣೆ ಪತ್ರವನ್ನು ಈ ನ್ಯಾಯಾಲಯದಲ್ಲಿ ಹಾಕಿರುತ್ತಾರೆ.

**2. ಅಭಿಯೋಗ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆ.**

ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ, ತಟ್ಟೆಕೆರೆ ಗ್ರಾಮದ ವಾಸಿಯಾದ ಚಾಸಾ-1/ಶಿವನಯ್ಯರವರಿಗೂ ಹಾಗೂ ಅದೇ ಗ್ರಾಮದ ವಾಸಿಯಾದ ಆರೋಪಿಗೂ ಮತ್ತು ಪಕ್ಕದಲ್ಲಿರುವ ಶಿವಪುರ ಗ್ರಾಮದ ವಾಸಿಯಾದ ಶಿವಶಂಕರ್ ರವರಿಗೂ ಮಠದ ವಿಚಾರದಲ್ಲಿ ವೈಮನಸ್ಸಿದ್ದು, ಇಬ್ಬರೂ ಚಾಸಾ-1ರವರ ಮೇಲೆ ಹಗೆ ಸಾಧಿಸುತ್ತಿರುತ್ತಾರೆ. ಶಿವಶಂಕರ ರವರು ತನ್ನ ಸಂಬಂಧಿಕಳಾದ ತಟ್ಟೆಕೆರೆ ವಾಸಿ ಮಂಗಳಮ್ಮ ಎಂಬುವವರನ್ನು ಚಾಸಾ-1 ರವರ ಮೇಲೆ ಪ್ರಚೋದಿಸಿ ಚಾಸಾ-1 ರವರಿಂದ ಹಣ ಪಡೆಯುವ ಉದ್ದೇಶದಿಂದ ದಿನಾಂಕ:27.11.2017 ರಂದು ಚಾಸಾ-1 ರವರ ವಿರುದ್ಧ ಹಾರೋಹಳ್ಳಿ ಪೋಲೀಸ್ ಠಾಣೆಯಲ್ಲಿ ಸುಳ್ಳು ದೂರನ್ನು ದಾಖಲಿಸಿರುತ್ತಾರೆ. ಚಾಸಾ-1 ರವರು ದಿನಾಂಕ:08.12.2017 ರಂದು ವಿಚಾರಣೆಗೆ ಹಾಜರಾಗುವ ಸಮಯದಲ್ಲಿ ಶಿವಶಂಕರ್, ಆರೋಪಿ ಹಾಗೂ ಪರಮೇಶ ರವರು ಮೊದಲೇ ಸಂಚು ಮಾಡಿಕೊಂಡು ವಿಚಾರಣೆಯಾದ ನಂತರ ಚಾಸಾ-1 ರವರು ಮನೆಗೆ ವಾಪಸ್ಸು ಹೋಗುವಾಗ ಸಂಜೆ ಸುಮಾರು 5.00 ಗಂಟೆ ಸಮಯದಲ್ಲಿ ಗೋಧೂರು ಗೇಟ್ ಬಳಿ ಶಿವಶಂಕರ ಮತ್ತು ಆರೋಪಿ ಚಾಸಾ-1 ರವರನ್ನು ಅಡ್ಡಗಟ್ಟಿ ನೀನು ನಮಗೆ ಹಣ ಕೊಡದಿದ್ದರೆ ನೀನು ಮಂಗಳರವರಿಗೆ ಫೋನ್ ಮಾಡುತ್ತಿದ್ದೆ ಎಂದು ಪ್ರಚಾರ ಮಾಡಿ ನಿಮ್ಮ ಮಾನ ಹಾಳಾಗುವಂತೆ ಮಾಡುತ್ತೇವೆ ಎಂದು ಹೇಳಿ ಬಲವಂತವಾಗಿ ಹಣವನ್ನು ಕೊಡುವಂತೆ ಬೆದರಿಸಿರುತ್ತಾರೆ. ನಂತರ ಚಾಸಾ-1 ರವರು ಹೆದರಿಕೊಂಡು ತನ್ನ ಬಳಿ ಇದ್ದ ಸುಮಾರು ರೂ.5,000/-ಗಳನ್ನು ಕೊಟ್ಟಾಗ, ಹಣವನ್ನು ತೆಗೆದುಕೊಂಡು ಈ ವಿಚಾರವನ್ನು ಯಾರಿಗೂ ಹೇಳಬೇಡ ಎಂದು ಹೆದರಿಸಿ ಹೋಗಿರುತ್ತಾರೆ. ಈ ವಿಚಾರವಾಗಿ

ಆರೋಪಿತನ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕೆಂದು ಕೋರಿ ಸದರಿ ಚಾಸಾ.1/ಶಿವನಯ್ಯ ರವರು ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಹಾರೋಹಳ್ಳಿ ಪೋಲೀಸ್ ಠಾಣಾ ಮೊಕದ್ದಮೆ ಸಂಖ್ಯೆ.554/2017ರ ಅಡಿಯಲ್ಲಿ ಗುನ್ನೆ ದಾಖಲೆ ಮಾಡಿಕೊಂಡು ತನಿಖೆ ಮಾಡಿ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಪೋಲೀಸರು ಸಲ್ಲಿಸಿರುತ್ತಾರೆ.

**3.** ಆರೋಪಿತನು ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನಿನ ಮೇಲೆ ಇರುತ್ತಾರೆ. ಆರೋಪಿತನಿಗೆ ಅಭಿಯೋಗದ ಎಲ್ಲಾ ಕಾಗದ ಪತ್ರಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.207ರ ಅಡಿಯಲ್ಲಿ ಕೊಟ್ಟಿದ್ದು ಇರುತ್ತದೆ. ವಾದ ವಿವಾದಗಳನ್ನು ಕೇಳಿದೆನು, ದೋಷಾರೋಪಣೆ ರಚಿಸಿ ಆರೋಪಿತನಿಗೆ ಓದಿ ಹೇಳಲಾಗಿ ಆರೋಪಿಯು ತಾನು ಯಾವುದೇ ತಪ್ಪು ಮಾಡಿಲ್ಲ, ವಿಚಾರಣೆ ಮಾಡಲು ಕೋರಿರುತ್ತಾರೆ. ಕಾರಣ ಅಭಿಯೋಗ ಪಕ್ಷವು ಒಟ್ಟು 06 ಜನ ಸಾಕ್ಷಿದಾರರನ್ನು ಪ್ರಾಸಾ.1 ರಿಂದ ಪ್ರಾಸಾ.6 ಎಂದು ವಿಚಾರಣೆ ಮಾಡಿಕೊಂಡಿದ್ದು ಇರುತ್ತದೆ ಹಾಗೂ 5 ದಸ್ತಾವೇಜುಗಳನ್ನು ನಿ.ಪಿ.1 ರಿಂದ ನಿ.ಪಿ.5 ಎಂದು ಗುರುತಿಸಿಕೊಂಡಿರುತ್ತಾರೆ.

**4.** ಚಾಸಾ-1 ರವರು ಪಿರ್ಯಾದುದಾರರು ಮತ್ತು ಕೃತ್ಯಸ್ಥಳದ ಪಂಚನಾಮೆ ಸಾಕ್ಷಿದಾರರಾಗಿದ್ದು, ಚಾಸಾ-2 ಮತ್ತು ಚಾಸಾ-3 ರವರು ಸಾಂದರ್ಭಿಕ ಸಾಕ್ಷಿದಾರರು ಮತ್ತು ಕೃತ್ಯಸ್ಥಳದ ಪಂಚನಾಮೆ ಸಾಕ್ಷಿದಾರರಾಗಿದ್ದು, ಚಾಸಾ-4 ಮತ್ತು ಚಾಸಾ-5 ರವರು ಅಮಾನತ್ತು ಪಂಚನಾಮೆ ಸಾಕ್ಷಿದಾರರಾಗಿದ್ದು, ಚಾಸಾ-6 ರವರು ತನಿಖಾಧಿಕಾರಿಗಳಾಗಿರುತ್ತಾರೆ. ಸದರಿ ಸಾಕ್ಷಿದಾರರ ಪೈಕಿ, ಪ್ರಾಸಾ-3 ರಿಂದ ಪ್ರಾಸಾ-5 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ಪ್ರಾಸಾ-1 ಮತ್ತು ಪ್ರಾಸಾ-2 ರವರು ಅಭಿಯೋಜನೆಯ ಪರ ಭಾಗಶಃ ಸಾಕ್ಷ್ಯ ನುಡಿದಿದ್ದು, ಪ್ರಾಸಾ-6 ರವರು

ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದರಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಆರೋಪಿಯು ಅಭಿಯೋಗದ ಪರ ವಿಚಾರಣೆಗೊಳಗೊಂಡ ಎಲ್ಲಾ ಸಾಕ್ಷ್ಯವನ್ನು ನಿರಾಕರಿಸಿದ್ದು ಇರುತ್ತದೆ. ಆರೋಪಿಯು ತನ್ನ ಪರ ಯಾವುದೇ ಸಾಕ್ಷ್ಯ ವಿಚಾರಣೆ ಮಾಡುವುದರ ಮೂಲಕ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**5.** ನಾನು ಸಹಾಯಕ ಸರ್ಕಾರಿ ಅಭಿಯೋಗದ ಪರ ಹಾಗೂ ಆರೋಪಿತನ ಪರ ವಕೀಲರ ವಾದ ವಿವಾದಗಳನ್ನು ಕೇಳಿದೆನು.

**6.** ನಾನು ನಿರ್ಣಯಿಸುವಂತಹ ಅಂಶಗಳು ಈ ಕೆಳಗಿನಂತೆ ಇರುತ್ತದೆ.

ಅಂಶ-1: ಅಭಿಯೋಗ ಪಕ್ಷವು ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ.384 ರ ಅಡಿಯಲ್ಲಿ ಗುನ್ಹೆ ಮಾಡಿರುತ್ತಾರೆಂದು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆಯೇ ?

ಅಂಶ-2 :ಆದೇಶ ಏನು ?

**7.** ಈ ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಅಂಶ ನಂ.1 : ನಕಾರಾತ್ಮಕವಾಗಿ
ಅಂಶ ನಂ.2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

## **ಕಾರಣಗಳು**

**8. ಅಂಶ ನಂ.1:** ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದು ಈ ಮೇಲೆ ಈಗಾಗಲೇ ತಿಳಿಸಲಾಗಿರುತ್ತದೆ. ಅಭಿಯೋಜನೆಯು ಆರೋಪಿತನ ವಿರುದ್ಧದ ಅಪರಾಧಗಳನ್ನು ಸಾಬೀತುಪಡಿಸಲು ಒಟ್ಟು 6 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ

ಪ್ರಾಸಾ-6 ಎಂದು ವಿಚಾರಣೆಗೆ ಒಳಪಡಿಸುವ ಮೂಲಕ ನಿ.ಪಿ-1 ರಿಂದ ನಿ.ಪಿ-5 ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ.

**9.** ಪ್ರಾಸಾ-1 ರವರು ಪಿರ್ಯಾದುದಾರರು ಮತ್ತು ಕೃತ್ಯಸ್ಥಳದ ಪಂಚನಾಮೆ ಸಾಕ್ಷಿದಾರರಾಗಿದ್ದು, ಪ್ರಾಸಾ-2 ಮತ್ತು ಪ್ರಾಸಾ-4 ರವರು ಸಾಂದರ್ಭಿಕ ಸಾಕ್ಷಿದಾರರು ಮತ್ತು ಕೃತ್ಯಸ್ಥಳದ ಪಂಚನಾಮೆ ಸಾಕ್ಷಿದಾರಾಗಿದ್ದು, ಪ್ರಾಸಾ-3 ಮತ್ತು ಪ್ರಾಸಾ-5 ರವರು ಅಮಾನತ್ತು ಪಂಚನಾಮೆ ಸಾಕ್ಷಿದಾರಾಗಿದ್ದು, ಪ್ರಾಸಾ-6 ರವರು ತನಿಖಾಧಿಕಾರಿಗಳಾಗಿರುತ್ತಾರೆ. ಸದರಿ ಸಾಕ್ಷಿದಾರರ ಪೈಕಿ ಪ್ರಾಸಾ-3 ರಿಂದ ಪ್ರಾಸಾ-5 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದಾಗ್ಯೂ ಅವರು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ-1 ಮತ್ತು ಪ್ರಾಸಾ-2 ರವರು ಅಭಿಯೋಗ ಪಕ್ಷಕ್ಕೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

**10.** ಪ್ರಾಸಾ-1/ಶಿವನಯ್ಯ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ:29.07.2017 ರಂದು ಮಂಗಳಮ್ಮ ಎನ್ನುವವರು ತನ್ನ ವಿರುದ್ದ ಹಾರೋಹಳ್ಳಿ ಪೊಲೀಸ್ ಠಾಣೆಗೆ ಸುಳ್ಳು ದೂರು ನೀಡಿದ್ದು, ಆ ಕುರಿತು ತಾನು ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದಿನಾಂಕ:08.09.2017 ರಂದು ಮನೆಗೆ ಸಂಜೆ 5.00 ಗಂಟೆ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ಮರಳುತ್ತಿದ್ದಾಗ ಹಾರೋಹಳ್ಳಿ-ಆನೇಕಲ್ ರಸ್ತೆ, ಗೋದೂರು ಗೇಟ್ ಬಳಿ ಮಹದೇವಯ್ಯ ಮತ್ತು ಶಿವಶಂಕರ್ ರವರು ತಮ್ಮ ವಾಹನಕ್ಕೆ ಅಡ್ಡಬಂದು ತನ್ನನ್ನು ತಡೆದು ನಿಲ್ಲಿಸಿ ಮಂಗಳಮ್ಮ ಇವರ ಮೂಲಕ ನಿನ್ನ ವಿರುದ್ದ ದೂರು ಕೊಡಿಸಿದ್ದು, ನಮಗೆ ಹಣ ನೀಡದೆ ಇದ್ದರೆ ನಿನ್ನ ಪರವಾಗಿ ಅಪಪ್ರಚಾರ ಮಾಡುತ್ತೇವೆಂದು ಬೆದರಿಕೆ ಹಾಕಿರುತ್ತಾರೆ. ತನ್ನ ಪ್ಯಾಂಟಿನ ಜೇಬಿನಲ್ಲಿದ್ದ 2

ಸಾವಿರ ರೂಪಾಯಿ ಹಣವನ್ನು ಶಿವಶಂಕರ್ ಮತ್ತು ಮಹದೇವಯ್ಯ ತೆಗೆದುಕೊಂಡು ಹೋಗಿರುತ್ತಾರೆ. ಅದೇ ದಿನ ಸಂಜೆ 6.00 ಗಂಟೆ ಸುಮಾರಿಗೆ ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಮರುದಿವಸ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಪಂಚರ ಸಮಕ್ಷಮ ಪಂಚನಾಮೆ ಮಾಡಿ ತನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**11.** ಪ್ರಾಸಾ-2/ನಾಗೇಶ್ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ.08.11.2017 ರಂದು ಗಲಾಟೆಯಾದ ಸ್ಥಳದಲ್ಲಿ ಮಹಜರ್ ಮಾಡುವ ಕಾಲಕ್ಕೆ ತಾನು ನಿಪಿ-2ಕ್ಕೆ ಸಹಿ ಮಾಡಿರುತ್ತೇನೆ. ಬೆಳಿಗ್ಗೆ 10.30 ರಿಂದ 11.30 ಗಂಟೆಯ ಒಳಗೆ ನಿಪಿ-2ಕ್ಕೆ ತಾನು ಸಹಿ ಮಾಡಿರುತ್ತೇನೆ. ಆ ದಿನ ನಿಪಿ-2ನ್ನು ತಯಾರಿಸುವಾಗ ಸ್ಥಳದಲ್ಲಿ ತಾನು ಮತ್ತು ಮಹದೇವಯ್ಯ ಎನ್ನುವವರು ಮಾತ್ರ ಇದ್ದೆವು, ತಮ್ಮನ್ನು ಹೊರತು ಪಡಿಸಿ ಮತ್ಯಾರು ಇರಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**12.** ಪ್ರಾಸಾ-6/ಕೃಷ್ಣಕುಮಾರ್.ಸಿ, ಪಿ.ಐ, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ.08.12.2017 ರಂದು ರಾತ್ರಿ 8.30ಕ್ಕೆ ತಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಅದರ ಆಧಾರದ ಮೇಲೆ ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ ನಂ.554/2017 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ತನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕ.09.12.2017 ರಂದು ಬೆಳಗ್ಗಿನ ಜಾವ ಆರೋಪಿಯನ್ನು ತಟ್ಟೆಕೆರೆ ಗ್ರಾಮದಿಂದ ಠಾಣೆಗೆ ಕರೆದುಕೊಂಡು ಬಂದು ತನ್ನ

ಸಮಕ್ಷಮ ಹಾಜರುಪಡಿಸಿದ ಮೇರೆಗೆ ಆತನನ್ನು ವಿಚಾರಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯ ಸ್ವಇಚ್ಛಾ ಹೇಳಿಕೆಯ ಆಧಾರದ ಮೇಲೆ ಆರೋಪಿಯು ಸುಲಿಗೆ ಮಾಡಿದಂತಹ ಎರಡು ಸಾವಿರ ರೂಪಾಯಿಯನ್ನು ಆತನಿಂದ ಅಮಾನತ್ತು ಪಡಿಸಿಕೊಂಡು ಪಂಚರಾದ ಚಾಸಾ-4 ಮತ್ತು ಚಾಸಾ-5 ರವರ ಸಮಕ್ಷಮ ಬೆಳಿಗ್ಗೆ 5.10 ರಿಂದ 5.40 ಗಂಟೆ ಸಮಯದವರೆಗೆ ಪಂಚನಾಮೆಯನ್ನು ತಯಾರಿಸಿರುತ್ತೇನೆ. ನಂತರ ಅದೇ ದಿನ ಬೆಳಿಗ್ಗೆ 10.30 ರಿಂದ 11.00 ರವರೆಗೆ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತೇನೆ. ದಿನಾಂಕ.12.12.2017 ರಂದು ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ.15.12.2017 ರಂದು ಆರೋಪಿಯ ಮರುಹೇಳಿಕೆಯನ್ನು ಹಾಗೂ ಚಾಸಾ-2 ಮತ್ತು ಚಾಸಾ-3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆಪರಾಧ ಸಾಬೀತಾದ ಕಾರಣಕ್ಕೆ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಈ ಪ್ರಕರಣದಲ್ಲಿ ಪ್ರಾಸಾ-1, ಪ್ರಾಸಾ-2, ಮತ್ತು ಪ್ರಾಸಾ-6 ರವರ ಸಾಕ್ಷ್ಯ ವಿಚಾರಣೆಯ ಮತ್ತು ಪಾಟೀಸವಾಲಿನಿಂದ ಘಟನೆಗೆ ಸಂಬಂಧಿಸಿದಂತೆ ಅವರ ಮೌಖಿಕ ಸಾಕ್ಷ್ಯವು ಒಂದಕ್ಕೊಂದು ಪೂರಕವಾಗಿರದೆ ವಿಭಿನ್ನವಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಇಲ್ಲಿ ಅತಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಈ ಪ್ರಕರಣದಲ್ಲಿ ನಿಪಿ-1ರ ಪ್ರಕಾರ ಆರೋಪಿಯು ಪ್ರಾಸಾ-1ರವರಿಂದ ಐದು ಸಾವಿರ ರೂಪಾಯಿಗಳನ್ನು ಹೆದರಿಸಿ ಬೆದರಿಸಿ ತೆಗೆದುಕೊಂಡು ಹೋಗಿರುತ್ತಾನೆ ಎನ್ನುವುದಾಗಿರುತ್ತದೆ. ಆದರೆ ಪ್ರಾಸಾ-1ರವರು ತಮ್ಮ

ಮುಖ್ಯವಿಚಾರಣೆ ಸಾಕ್ಷ್ಯದಲ್ಲಿ ಆರೋಪಿ ತನ್ನಿಂದ ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋದರು ಎಂದು ನುಡಿದಿರರುತ್ತಾರೆ. ಐದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿರುತ್ತಾರೆಂದು ಹೇಳಿಕೆ ಕೊಟ್ಟ ಬಗ್ಗೆ ಪ್ರಾಸಾ-1ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ ಸಂದರ್ಭದಲ್ಲಿ ಅದನ್ನು ನಿರಾಕರಿಸಿರುತಾರೆ. ನಿಪಿ-1ರಲ್ಲಿ ಬರೆದ ಸಂಗತಿಗೂ ಪ್ರಾಸಾ-1ರವರ ಮುಖ್ಯವಿಚಾರಣೆಗೂ ಬಹಳಷ್ಟು ವ್ಯತ್ಯಾಸವಿರುವುದು ಮೆಲ್ನೋಟಕ್ಕೆ ಕಂಡುಬರುತ್ತದೆ. ಈ ಪ್ರಕರಣದಲ್ಲಿ ಘಟನೆ ನಡೆದ ಬಗ್ಗೆ ಯಾವುದೇ ಪ್ರತ್ಯಾಕ್ಷ ಸಾಕ್ಷಿಯು ಲಭ್ಯವಿರುವುದಿಲ್ಲ ಮತ್ತು ಸ್ಥಳದಲ್ಲಿ ಹಾಜರು ಇದ್ದರು ಎಂದು ಹೇಳುವ ಮಂಗಳಮ್ಮರವರನ್ನು ಸಹ ಈ ಪ್ರಕರಣದಲ್ಲಿ ಸಾಕ್ಷಿದಾರಳನ್ನಾಗಿ ತೋರಿಸಿರುವುದಿಲ್ಲ. ಸಾಮಾನ್ಯವಾಗಿ ಹಲ್ಲೆಗೆ ಒಳಗಾದ ವ್ಯಕ್ತಿಗಳು ತಮಗಾದ ಹಲ್ಲೆಯ ಬಗ್ಗೆ ಸ್ವತಂತ್ರ್ಯವಾಗಿ ಸಾಕ್ಷಿ ನುಡಿಯುವುದು ಸಾಮಾನ್ಯವಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಪ್ರಾಸಾ-1ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಉತ್ತರ ಸೂಚಿಸಿದ ಪ್ರಶ್ನೆಗಳನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಕೇಳಿದಾಗಲೇ ಅವರು ಕೆಲವೊಂದು ಪ್ರಶ್ನೆಗಳಿಗೆ ಹೌದು ಸರಿ ಎಂದು ಉತ್ತರಿಸಿರುತ್ತಾರೆ ಮತ್ತು ಕೆಲವೊಂದು ಸೂಚನೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಪ್ರತಿಕೂಲ ಸಾಕ್ಷ್ಯದಲ್ಲಿ ಹೇಳಿದಂತಹ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲು ಕಾನೂನಡಿಯಲ್ಲಿ ಸಾಧ್ಯವಿರುವುದಿಲ್ಲ. ನಿಪಿ-1 ಮತ್ತು ಪ್ರಾಸಾ-1ರವರ ಮುಖ್ಯವಿಚಾರಣೆಯ ಪ್ರಕಾರ ನಿಪಿ-1 ರಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸ್ಪಷ್ಟವಾಗಿರುತ್ತದೆ. ಪ್ರಾಸಾ-2ರವರು ಪ್ರಾಸಾ-1ರವರ ಸಂಬಂಧಿಕರಾಗಿರುವ ಕಾರಣಕ್ಕೆ ಮತ್ತು ಪ್ರಾಸಾ-6 ರವರು ಇಲಾಖಾ ಸಾಕ್ಷಿದಾರರಾಗಿರುವ ಕಾರಣಕ್ಕೆ ಅವರು ಅಭಿಯೋಜನೆಯ ಪರವಾಗಿ ಸಾಕ್ಷ್ಯ

ನುಡಿಯುವುದು ಸರ್ವೇ ಸಾಮಾನ್ಯವಾಗಿರುತ್ತದೆ. ಕೇವಲ ಪ್ರಾಸಾ-1, ಪ್ರಾಸಾ-2 ಹಾಗೂ ಇಲಾಖಾ ಸಾಕ್ಷಿದಾರರ ಸಾಕ್ಷ್ಯವನ್ನು ಈ ಪ್ರಕರಣದಲ್ಲಿ ಪರಿಗಣಿಸಲು ಸಾಧ್ಯವಿರುವುದಿಲ್ಲ.

**14.** ಇಲ್ಲಿ ಗಮನಿಸಬೇಕಾದ ಅತೀ ಮುಖ್ಯವಾದ ಮತ್ತೊಂದು ಅಂಶವೇನೆಂದರೆ ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-2ರವರು ಪ್ರಾಸಾ-1 ರವರ ಸಂಬಂಧಿಕರಾಗಿದ್ದು, ಅವರು ಪ್ರಾಸಾ-1 ರವರ ಪರವಾಗಿ ಸಾಕ್ಷ್ಯ ನುಡಿಯುವುದು ಸರ್ವೇ ಸಾಮಾನ್ಯವಾಗಿರುತ್ತದೆ. ಆದ್ದರಿಂದ ಕೇವಲ ಪ್ರಾಸಾ-2 ಮತ್ತು ಪ್ರಾಸಾ-6 ರವರ ಸಾಕ್ಷ್ಯ ವಿಚಾರಣೆಯ ಆಧಾರದ ಮೇಲೆ ಆರೋಪಿಯ ವಿರುದ್ಧ ಹೊರಿಸಲಾದ ಆಪಾದನೆಗಳು ಸಾಬೀತಾಗುವುದಿಲ್ಲ. ಈ ಪ್ರಕರಣದ ವಸ್ತು ಸ್ಥಿತಿಗಳನ್ನು ಗಮನಿಸಿದಾಗ ಭಾ.ದಂ.ಸಂ ಕಲಂ.384 ಈ ಪ್ರಕರಣಕ್ಕೆ ಅನ್ವಯವಾಗವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ಪ್ರಾಸಾ-1 ರವರ ಸಂಬಂಧಿಕರುಗಳನ್ನು ಹೊರತು ಪಡಿಸಿ ಬೇರೆ ಸ್ವತಂತ್ರ ಸಾಕ್ಷಿದಾರರ ಅಥವಾ ಗ್ರಾಮಸ್ಥರ ಸಾಕ್ಷ್ಯವು ಲಭ್ಯವಿರುವುದಿಲ್ಲ. ಒಂದು ವೇಳೆ ನಿಪಿ-1 ರಲ್ಲಿ ಹೇಳಿದಂತೆ ಘಟನೆ ನಡೆದಿದ್ದೇ ಆಗಿದ್ದರೆ ಗ್ರಾಮಸ್ಥರು ಆ ಬಗ್ಗೆ ಸಾಕ್ಷ್ಯ ನುಡಿಯಬಹುದಾಗಿತ್ತು. ಆದರೆ ಈ ಪ್ರಕರಣದಲ್ಲಿ ಘಟನೆಗೆ ಸಂಬಂಧಿಸಿದಂತೆ ಗ್ರಾಮಸ್ಥರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಮತ್ತು ಗ್ರಾಮಸ್ಥರನ್ನು ಸಾಕ್ಷಿದಾರರ ಪಟ್ಟಿಯಲ್ಲಿಯೂ ಸೇರಿಸದೇ ಇರುವುದು ಘಟನೆಗೆ ಸಂಬಂಧಿಸಿದಂತೆ ಸಂಶಯವನ್ನು ಮೂಡಿಸುತ್ತದೆ. ಕೇವಲ ಪ್ರಾಸಾ-1, ಪ್ರಾಸಾ-2 ಮತ್ತು ಪ್ರಾಸಾ-6 ರವರ ಸಾಕ್ಷಾಧಾರಗಳ ಮೇಲೆ ಆರೋಪಿತನ ವಿರುದ್ಧ ಹೊರಿಸಲಾದ ಆಪಾದನೆಗಳು ಸಾಬೀತಾಗುವುದಿಲ್ಲ. ಆರೋಪಿತನ ವಿರುದ್ಧ ಹೊರಿಸಿದಂತಹ ಆಪಾದನೆಗಳು ಲಭ್ಯವಿರುವ ಸಾಕ್ಷ್ಯಾಧಾರಗಳು ಮತ್ತು ದಾಖಲೆಗಳ ಆಧಾರದ ಮೇಲೆ ಸಾಬೀತಾಗದೇ ಇರುವ ಕಾರಣ ಅಭಿಯೋಗ ಪಕ್ಷವು

ಆರೋಪಿತನ ವಿರುದ್ಧ ಗುನ್ನೆ ಸಾಬೀತುಪಡಿಸುವಲ್ಲಿ ವಿಫಲವಾಗಿರುವುದಾಗಿ ಹೇಳಿ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಅಂಶ-1 ನ್ನು ನಕರಾತ್ಮಕವಾಗಿ ಉತ್ತರಿಸುತ್ತೇನೆ.

**15. ಅಂಶ.2:-** ಮೇಲೆ ಹೇಳಿದ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶ ಮಾಡಿದ್ದು ಇರುತ್ತದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ.248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿಕೊಂಡು ಆರೋಪಿತನನ್ನು ಭಾರತೀಯ ದಂಡ ಸಂಹಿತೆಯ ಕಲಂ.384 ರಡಿಯಲ್ಲಿನ ದಂಡನಾರ್ಹ ಅಪರಾಧದಿಂದ ಮುಕ್ತಗೊಳಿಸಿ ನಿರ್ದೋಷಿ ಎಂದು ಬಿಡುಗಡೆಗೊಳಿಸಲಾಗಿದೆ.

ಪಿಎಫ್‌ನಂ.190/2017, ದಿನಾಂಕ: 09-12-2017 ರಡಿಯಲ್ಲಿ ಅಮಾನತು ಪಡಿಸಿಕೊಂಡಿರುವ ರೂ.2,000/-ಗಳನ್ನು

ಆಪೀಲು ಅವಧಿ ಮುಗಿದ ನಂತರ ಪ್ರಾಸಾ-1/ಚಾಸಾ-1 ಶಿವನಯ್ಯರವರಿಗೆ ಹಿಂದಿರುಗಿಸಲು ಆದೇಶಿಸಿರುತ್ತೇನೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ **ದಿನಾಂಕ 01ನೇ ಜೂನ್ 2026 ರಂದು** ಉದ್ಘೋಷಿಸಲಾಯಿತು).

(ಶ್ರೀಮತಿ ರಾಧಾ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ.

## ಅನುಬಂಧ

**1. ಅಭಿಯೋಜನೆಯ ಪರ ಸಾಕ್ಷಿ ನುಡಿದವರ ಪಟ್ಟಿ:-**

ಪ್ರಾಸಾ.1 - ಶಿವನಯ್ಯ
ಪ್ರಾಸಾ.2 - ನಾಗೇಶ್
ಪ್ರಾಸಾ.3 - ಸದಾಶಿವ.ಟಿ.ಎಸ್
ಪ್ರಾಸಾ.4 - ಗೋಪಿ
ಪ್ರಾಸಾ.5 - ಚಂದ್ರಪ್ಪ
ಪ್ರಾಸಾ.6 - ಸಿ.ಕೃಷ್ಣಕುಮಾರ್

**2. ಅಭಿಯೋಜನೆಯ ಪರ ಹಾಜರುಪಡಿಸಿದ ದಾಖಲೆಗಳ ಪಟ್ಟಿ:-**

ನಿಪಿ.1 - ದೂರು
ನಿಪಿ.1(ಎ) - ಪ್ರಾಸಾ-1 ರವರ ಸಹಿ
ನಿಪಿ.1(ಬಿ) - ಪ್ರಾಸಾ-6 ರವರ ಸಹಿ
ನಿಪಿ.2 - ಪಂಚನಾಮೆ
ನಿಪಿ.2(ಎ) - ಪ್ರಾಸಾ-1 ರವರ ಸಹಿ

| | | |
|---|---|---|
| ನಿಪಿ.2(ಬಿ) | - | ಪ್ರಾಸಾ-2 ರವರ ಸಹಿ |
| ನಿಪಿ.2(ಸಿ) | - | ಪ್ರಾಸಾ-3 ರವರ ಸಹಿ |
| ನಿಪಿ.2(ಡಿ) | - | ಪ್ರಾಸಾ-4 ರವರ ಸಹಿ |
| ನಿಪಿ.3 | - | ಪ್ರಾಸಾ-1ರವರ ಹೇಳಿಕೆ |
| ನಿಪಿ.4 | - | ಅಮಾನತ್ತು ಪಂಚನಾಮೆ |
| ನಿಪಿ.4(ಎ) | - | ಪ್ರಾಸಾ-1 ರವರ ಸಹಿ |
| ನಿಪಿ.4(ಬಿ) | - | ಪ್ರಾಸಾ-5 ರವರ ಸಹಿ |
| ನಿಪಿ.4(ಸಿ) | - | ಪ್ರಾಸಾ-6 ರವರ ಸಹಿ |
| ನಿಪಿ.5 | - | ಗಾಯದ ಪ್ರಮಾಣ ಪತ್ರ |
| ನಿಪಿ.5(ಎ) | - | ಪ್ರಾಸಾ-6 ರವರ ಸಹಿ |

**3. ಆರೋಪಿತನ ಪರ ಸಾಕ್ಷಿ ನುಡಿದವರ ಪಟ್ಟಿಃ-**

-ಇಲ್ಲಾ-

**4. ಆರೋಪಿತನ ಪರ ಹಾಜರುಪಡಿಸಿದ ದಾಖಲೆಗಳ ಪಟ್ಟಿಃ-**

-ಇಲ್ಲಾ-

(ಶ್ರೀಮತಿ ರಾಧಾ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ.